# ಕಿಮ್ ಎಂಬ ಕೌತುಕ



ಪ್ರವೀಣ ಕುಲಕರ್ಣಿ

ಅದು ಪ್ಯಾರಿಸ್ ಇರಲಿ, ಲಾಸ್ ಏಂಜಲೀಸ್ ಇರಲಿ, ಇಲ್ಲವೆ ತವರಿನ ಬೂಸಾನ್ ಆಗಿರಲಿ – ಕಾರ್ಟೂನಿಸ್ಟ್ ಕಿಮ್ ಜಂಗ್ ಗಿ ಅವರ ಲೈವ್ ಶೋ ಇದೆಯೆಂದರೆ ಕಲಾಪ್ರಿಯರು ಕಿಕ್ಕಿರಿದು ತುಂಬುತ್ತಿದ್ದರು. ಕಲ್ಪನಾಲೋಕಕ್ಕೆ ಬಣ್ಣ ತುಂಬಿದ ಈ ಕಲಾವಿದನನ್ನು ನೋಡಲು ಪುಟಾಣಿಗಳ ದಂಡೂ ಬರುತ್ತಿತ್ತು. ಜಗದ್ವಿಖ್ಯಾತರಾಗಿದ್ದ ಈ ಕಾರ್ಟೂನಿಸ್ಟ್ ಕಳೆದ ವಾರ ಕೊನೆಯುಸಿರೆಳೆದಾಗ ಜಗತ್ತಿನ ಕಲಾಲೋಕಕ್ಕೇ ಒಂದು ರೀತಿಯಲ್ಲಿ ಗರ ಬಡಿದಂತಾಗಿತ್ತು. ಬಣ್ಣದ ಸಹವಾಸದಲ್ಲೇ ಯೂರೋಪ್ ಪ್ರವಾಸ ಮುಗಿಸಿದ ಕಿಮ್, ನ್ಯೂಯಾರ್ಕ್‌ಗೆ ಹೊರಟು ನಿಂತಾಗ ವಿಮಾನ ನಿಲ್ದಾಣದಲ್ಲಿಯೇ ಹೃದಯ ಸ್ತಂಭನದಿಂದ ಸಾವನ್ನಪ್ಪಿದರು. ಜಗತ್ತಿನ ಅತ್ಯಂತ ‘ಬ್ಯುಸಿ ಕಲಾವಿದ’ ಇದ್ದಕ್ಕಿದ್ದಂತೆ ಕುಂಚವನ್ನು ಶಾಶ್ವತವಾಗಿ ಕೆಳಗಿಟ್ಟರು.

ದಕ್ಷಿಣ ಕೊರಿಯಾದ ಈ ಕಾರ್ಟೂನಿಸ್ಟ್ ಗೆರೆಗಳೊಂದಿಗೆ ಸರಸವಾಡುತ್ತಾ ಕಲಾಜಗತ್ತನ್ನು ದಿಗ್ಭ್ರಮೆಗೊಳಿಸುವ ಲೋಕಕ್ಕೆ ಕರೆದೊಯ್ದವರು. ಕ್ಯಾನ್‌ವಾಸ್ ಎಷ್ಟೇ ದೊಡ್ಡದಿರಲಿ, ಯಾವ ಉಲ್ಲೇಖಗಳನ್ನೂ ನೋಡದೆ, ಸ್ಮರಣೆ ಮಾತ್ರದಿಂದಲೇ ಅತ್ಯಂತ ಸಂಕೀರ್ಣವಾದ ಸನ್ನಿವೇಶಗಳನ್ನು ಕೆಲವೇ ಕ್ಷಣಗಳಲ್ಲಿ ಮೂಡಿಸಿ ಬೆರಗು ಉಂಟುಮಾಡಿದವರು. ಸುದೀರ್ಘ ರೇಖಾಚಿತ್ರ ರಚಿಸಿದ ಗಿನ್ನೀಸ್ ದಾಖಲೆ ಕೂಡ ಅವರದು. ಯಾವುದೇ ತಯಾರಿ ಮಾಡಿಕೊಳ್ಳದೆ, ಪೆನ್ಸಿಲ್‌ನಿಂದ ಬೇಸ್ ಅನ್ನೂ ಸಿದ್ಧಪಡಿಸಿಕೊಳ್ಳದೆ ತಮ್ಮ ಬ್ರಶ್–ಪೆನ್‌ನಿಂದ ಬಣ್ಣದ ಗೆರೆಗಳನ್ನು ಎಳೆಯುತ್ತಲೇ ಚಿತ್ರ ಮೂಡಿಸುವ ಅವರ ಕೌಶಲವನ್ನು ಮೆಚ್ಚದವರೇ ಇಲ್ಲ.

ದಕ್ಷಿಣ ಕೊರಿಯಾದ ಗೊಯಾಂಗ್ ಸಿ ಎಂಬಲ್ಲಿ 1975ರಲ್ಲಿ ಜನಿಸಿದ ಕಿಮ್, ಬಾಲ್ಯದಲ್ಲೇ ಕುಂಚದೊಂದಿಗೆ ಸ್ನೇಹ ಸಾಧಿಸಿದವರು. ಬೂಸಾನ್‌ನ ಕಲೆ ಮತ್ತು ವಿನ್ಯಾಸ ವಿಶ್ವವಿದ್ಯಾಲಯದಲ್ಲಿ ಓದಿದ ಅವರೊಬ್ಬ ಅಭಿಜಾತ ಕಲಾವಿದ. ವಿಶ್ವವಿದ್ಯಾಲಯದಿಂದ ಹೊರಬಿದ್ದ ಮೇಲೆ ಕಿಮ್ ಸೇನೆ ಸೇರಿದರು. ಅಲ್ಲಿ ಇವರೊಬ್ಬ ಕಲಾವಿದನೆಂದು ಗೊತ್ತಾಗಿ, ಹಲವು ಸೈನಿಕರು ತಮ್ಮ ಕುಟುಂಬದ ಸದಸ್ಯರ ಚಿತ್ರ ತೆಗೆದುಕೊಡುವಂತೆ ಬೆನ್ನುಬಿದ್ದರು. ‘ನಿರಂತರವಾಗಿ ಬರುತ್ತಿದ್ದ ಈ ಬೇಡಿಕೆ ನನ್ನ ಪಾಲಿಗೊಂದು ದೊಡ್ಡ ತಲೆನೋವಾಗಿತ್ತು’ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದ ಕಿಮ್, ಸೇನೆಯಲ್ಲಿ ಎರಡು ವರ್ಷಗಳ ಸೇವೆ ಮುಗಿಸಿದ ಮೇಲೆ ಪೂರ್ಣಪ್ರಮಾಣದಲ್ಲಿ ಕಾರ್ಟೂನಿಸ್ಟ್ ಆಗಿ ತೊಡಗಿಸಿಕೊಂಡರು.

ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಯುದ್ಧ ವಿಮಾನ, ಶಸ್ತ್ರಾಸ್ತ್ರಗಳ ವಿನ್ಯಾಸಗಳು ಈ ಕಲಾವಿದನ ಮನದಂಗಳದಲ್ಲಿ ಅಚ್ಚೊತ್ತಿದ್ದವು. ಅವುಗಳನ್ನು ಸ್ಮರಣೆಗೆ ತಂದುಕೊಂಡು ಚಿತ್ರ ಬಿಡಿಸತೊಡಗಿದರು. ‘ಅಲ್ಲಿನ ಪ್ರತಿಯೊಂದು ಆಯುಧವನ್ನೂ ನಾನು ತುಂಬಾ ಸೂಕ್ಷ್ಮವಾಗಿ ಗಮನಿಸುತ್ತಿದ್ದೆ. ಚಿತ್ರ ಬಿಡಿಸಲು ಕುಳಿತಾಗ ಅವುಗಳು ನನ್ನ ಕಣ್ಮುಂದೆಯೇ ಇರುವಂತೆ ಭಾಸವಾಗುತ್ತಿತ್ತು. ಸಣ್ಣ ಸಣ್ಣ ವಿವರಗಳೂ ನನ್ನ ಕಣ್ಣಳತೆಯಿಂದ ತಪ್ಪಿಸಿಕೊಳ್ಳುತ್ತಿರಲಿಲ್ಲ’ ಎಂದೂ ಅವರು ಹೇಳಿದ್ದರು.

ಕಿಮ್, ತಮ್ಮ ಕಲಾಯಾತ್ರೆಯ ಆರಂಭಿಕ ದಿನಗಳಲ್ಲಿ ಲೈಂಗಿಕತೆ ಮತ್ತು ನಗ್ನತೆಯಿಂದ ಕೂಡಿದ ಕಾಮಪ್ರಚೋದಕ ಚಿತ್ರಗಳನ್ನು ತೆಗೆಯುತ್ತಿದ್ದರು. ಇದರಿಂದ ಕಲಾಪ್ರಪಂಚದಿಂದ ತೀವ್ರ ಟೀಕೆಯನ್ನು ಎದುರಿಸಿದರು. ಅಂತಹ ಕೆಲವು ಕಲಾಕೃತಿಗಳು ಎಷ್ಟೊಂದು ಥಾಳಾಗಿದ್ದವು ಎಂದರೆ ಮುಂದೆ ಕಿಮ್ ಅವರಿಗೆ ಆ ಕಲಾಕೃತಿಗಳನ್ನು ತಮ್ಮ ಸ್ಕೆಚ್‌ಬುಕ್‌ನಲ್ಲಿ ಸೇರ್ಪಡೆ ಮಾಡಿಕೊಳ್ಳಲೂ ಸಾಧ್ಯವಾಗಲಿಲ್ಲ. ಆ ಕಲಾಕೃತಿಗಳನ್ನು ಮಾರಾಟ ಮಾಡಿ ಒಂದಿಷ್ಟು ದುಡ್ಡು ಮಾಡಿದರಷ್ಟೆ.

ಕೆಲವೇ ವರ್ಷಗಳಲ್ಲಿ ಕಿಮ್ ಅವರ ಕಲಾಪಯಣದ ದಿಕ್ಕೇ ಬದಲಾಯಿತು. ಮನುಷ್ಯರು, ಸಿಂಹಗಳು, ಹುಲಿಗಳು, ಪೌರಾಣಿಕ ಪಾತ್ರಗಳು, ಸೂಪರ್ ಹೀರೊಗಳು, ನಗರದ ನೋಟಗಳು, ಯುದ್ಧಗಳು... ಹೀಗೆ ಅದ್ಭುತ ಎನಿಸುವಂತಹ ಕಲಾಕೃತಿಗಳು ಅವರ ಕುಂಚದಿಂದ ಅರಳತೊಡಗಿದವು. ಅವರ ಕಾಲ್ಪನಿಕ ರೇಖಾಚಿತ್ರಗಳು ಒಳಗೊಳ್ಳದ ವಿಷಯವೇ ಇಲ್ಲ ಎನ್ನುವಂತೆ ಅವರ ಕಲಾಪ್ರಪಂಚ ವಿಸ್ತಾರಗೊಳ್ಳುತ್ತಾ ಸಾಗಿತು. ತಮ್ಮ ಸ್ಕೆಚ್‌ಗಳನ್ನು ಮಾರಾಟ ಮಾಡುವುದಷ್ಟೇ ಅಲ್ಲದೆ, ಆನ್‌ಲೈನ್ ಮೂಲಕ ಕಲಾ ಕೋರ್ಸ್‌ಗಳನ್ನು ಸಂಯೋಜಿಸುವುದು, ಕಾಮಿಕ್‌ಗಳಿಗೆ ಕೆಲಸ ಮಾಡುವುದು, ಗ್ಯಾಲರಿಗಳಲ್ಲಿ ಲೈವ್ ಪ್ರದರ್ಶನ ನೀಡುವುದು– ಹೀಗೆ ಚಟುವಟಿಕೆಗಳನ್ನು ವಿಸ್ತರಿಸುತ್ತಾ ಸಾಗಿದರು.

ಪ್ರೇಕ್ಷಕರ ಮುಂದೆ ವಿಸ್ತಾರವಾದ ಭಾವಚಿತ್ರಗಳನ್ನು ಚಿತ್ರಿಸುವಾಗ– ಕೆಲವೊಮ್ಮೆ ಹಲವಾರು ಗಂಟೆಗಳವರೆಗೆ– ಅವರು ಜೋಕ್‌ಗಳನ್ನು ಸಿಡಿಸುತ್ತಿದ್ದರು. ಕಲಾತ್ಮಕ ಪ್ರಕ್ರಿಯೆಯ ಒಳನೋಟಗಳನ್ನೂ ನೀಡುತ್ತಿದ್ದರು. ಫ್ರಾನ್ಸ್, ಅಮೆರಿಕ ಮತ್ತು ಏಷ್ಯಾದ ಹಲವೆಡೆ ನಡೆದ ಲೈವ್ ಡ್ರಾಯಿಂಗ್ ಸೆಷನ್‌ಗಳು ಭಾರಿ ಪ್ರಮಾಣದ ಕಲಾಸಕ್ತರನ್ನು ಸೆಳೆದವು. ಸಿನಿಮಾಗಳು, ಸಾಕ್ಷ್ಯಚಿತ್ರಗಳು, ಸರ್ಕಾರಿ ಯೋಜನೆಗಳು... ಹೀಗೆ ಹಲವು ಕಡೆಗಳಲ್ಲಿ ಅವರು ತಮ್ಮ ಕುಂಚದ ಪೆನ್‌ನೊಂದಿಗೆ ಕೆಲಸ ಮಾಡಿದರು. ಇನ್ನೂ ಹಲವು ಯೋಜನೆಗಳನ್ನು ಹಾಕಿಕೊಂಡಿದ್ದರು. ದಣಿವಿಲ್ಲದಂತೆ ಜಗತ್ತು ಸುತ್ತುತ್ತಿದ್ದರು. ಸದಾ ಬಿಡುವಿಲ್ಲದ ಕಾರ್ಯಕ್ರಮಗಳನ್ನು ಹೊಂದಿರುತ್ತಿದ್ದ ಅವರು ಈಗ ಇದ್ದಕ್ಕಿದ್ದಂತೆ ಚಿರನಿದ್ರೆಗೆ ಜಾರಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65